11. ಸಹಕಾರಿ ವಲಯದ ಮತ್ತು ಕೆಹೆಚ್‌ಡಿಸಿ ನೇಕಾರರು ಉಳಿತಾಯ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಲು ಪ್ರೋತ್ಸಾಹದಾಯಕವಾಗಿ ಅವರ ದುಡಿಮೆಯ ಶೇಕಡ 8 ರಷ್ಟನ್ನು ರಾಜ್ಯ ಸರ್ಕಾರದ ವತಿಯಿಂದ ಮಿತವ್ಯಯ ನಿಧಿ ಯೋಜನೆಯಡಿ ಸಮಚಂದಾ ನೀಡಲಾಗುವುದು ಮತ್ತು ವಾರ್ಷಿಕ ಶೇಕಡ 12 ರಷ್ಟು ಬಡ್ಡಿ ನೀಡಲಾಗುತ್ತಿದೆ.

12. ಸುವರ್ಣ ವಸ್ತ್ರ ನೀತಿಯಡಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರಿಕೆಯಲ್ಲಿ ಆರಂಭಿಕ ಮತ್ತು ಮುಂದುವರೆದ ತರಬೇತಿಯನ್ನು ನೀಡಲಾಗುತ್ತಿದೆ. ಹೊಸ ಘಟಕಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದರೆ ಸುವರ್ಣ ವಸ್ತ್ರ ನೀತಿಯಲ್ಲಿ ಸಹಾಯಧನವನ್ನು ಸಹ ನೀಡಲಾಗುವುದು.

13. ವಿದ್ಯುತ್ ಮಗ್ಗ ನೇಕಾರರ ಕ್ಲಸ್ಟರ್‌ಗಳಿಗೆ ಎಕ್ಸ್‌ಪ್ರೆಸ್ ಫೀಡರ್‌ನಿಂದ ವಿದ್ಯುತ್ ಪಡೆಯುವ ಸಲುವಾಗಿ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ನೀಡಲಾಗುತ್ತಿದೆ.

14. ಜಿಲ್ಲಾ ಮಟ್ಟದಲ್ಲಿಯು ಸಹ ಯೋಜನೆಗಳು ಇರುತ್ತವೆ.

* ಕೈಮಗ್ಗ ಉದ್ದಿಮೆಗಳಿಗೆ ಸಹಾಯ.
* ಶೇರು ಬಂಡವಾಳ.
* ಕೈಮಗ್ಗ ಉದ್ದಿಮೆಗಳಿಗೆ ಸಾಲಗಳು.
* ವಿದ್ಯುತ್ ಮಗ್ಗ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು.

ರೇಷ್ಮೆ ಕಾಯಿದೆ

282 (824) ಶ್ರೀ ರಾಜು.ಕೆ. (ರಾಮನಗರ):–(ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ರೇಷ್ಮೆ ಕಾಯಿದೆ ಜಾರಿ ವಿಭಾಗವನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದ ರೈತರಿಗೆ ಮತ್ತು ರೀಲರ್‌ಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ 3 ವರ್ಷಗಳಿಂದ ಯಾವ ಯಾವ ರೇಷ್ಮೆ ತಳಿಗಳನ್ನು ಪರಿಚಯಿಲಾಗಿದೆ (ವಿವರಗಳನ್ನು ನೀಡುವುದು);

ಈ) ಸರ್ಕಾರಿ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಉ) ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ರೈತರಿಗೆ ರೂ.5 ಸಾವಿರ ಸಹಾಯಧನ ನೀಡುತ್ತಿದ್ದು, ಅದನ್ನು 10 ಸಾವಿರಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು;

ಋ) ರೇಷ್ಮೆ ಹುಳು ಸಾಕಲು ರೈತರಿಗೆ ನೀಡುತ್ತಿರುವ ಸಹಾಯಧನವನ್ನು ಸುಮಾರು ವರ್ಷಗಳಿಂದ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಬಂದಿದ್ದಲ್ಲಿ, ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಏ) ರೇಷ್ಮೆ ಬೆಳೆಗಾರರಿಗೆ ಸಹಾಯಧನವನ್ನು ಒಂದು ಲಕ್ಷ ರೂ.ಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಮುಂದಿದ್ದಲ್ಲಿ ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು):–

ಅ) ರಾಜ್ಯದಲ್ಲಿ ರೇಷ್ಮೆ ಕಾಯಿದೆ ಜಾರಿ ವಿಭಾಗವನ್ನು ರದ್ದುಪಡಿಸಿಲ್ಲ. ಕೇಂದ್ರ ರೇಷ್ಮೆ ಮಂಡಳಿ ಕಾಯ್ದೆಯ ನಿಯಮಗಳ ತಿದ್ದುಪಡಿಯು (ಜವಳಿ ಮಂತ್ರಾಲಯದ ದಿನಾಂಕ: 24/11/2008ರ ಅಧಿಸೂಚನೆ) ದಿನಾಂಕ: 25/11/2008ರ ಭಾರತ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ. ಈ ಅಧಿಸೂಚನೆಯಂತೆ ರೇಷ್ಮೆ ಉದ್ಯಮದ ಕಚ್ಚಾ ವಸ್ತುಗಳು ಮತ್ತು ಉತ್ಪನ್ನಗಳ ಚಾಲನೆ ಮೇಲಿದ್ದ ನಿಯಂತ್ರಣವನ್ನು ಮುಕ್ತಗೊಳಿಸಲಾಗಿದೆ. ಇದರಿಂದ ರೇಷ್ಮೆ ಬಿತ್ತನೆ, ಗೂಡು, ನೂಲು ಬಿಚ್ಚಾಣಿಕೆಗೆ ಬಳಸುವ ಗೂಡು, ರೇಷ್ಮೆ ನೂಲು ಮತ್ತು ಇತರ ಉತ್ಪನ್ನಗಳ ದಾಸ್ತಾನು, ವಿತರಣೆ ಮತ್ತು ವಹಿವಾಟುಗಳನ್ನು ಮುಕ್ತಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಕಳೆದ ಮೂರು ವರ್ಷಗಳಿಂದ ಯಾವುದೇ ಹೊಸ ತಳಿಗಳನ್ನು ಅಧಿಕೃತವಾಗಿ ಪರಿಚಯಿಸಿರುವುದಿಲ್ಲ.

ಈ) ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಉನ್ನತೀಕರಣ / ಪುನ:ಶ್ಚೇತನಕ್ಕೆ ಸಂಬಂಧಿಸಿದಂತೆ ಅಂದಿನ ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 19/10/2006 ರಂದು ನಡೆದ ಸಭೆಯ ತೀರ್ಮಾನದಂತೆ, ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಉನ್ನತೀಕರಣ/ಪುನ:ಶ್ಚೇತನ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಮೊದಲನೆಯದಾಗಿ ರೇಷ್ಮೆ ಬೆಳವಣಿಗೆ

ಕೇಂದ್ರ, ಚಿತ್ರದುರ್ಗ ಹಾಗೂ ಮಧುಗಿರಿಗಳಲ್ಲಿರುವ ಮಲ್ಬಿಎಂಡ್ ಘಟಕಗಳನ್ನು ಸ್ಥಳಾಂತರಿಸಿ ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ ಮತ್ತು ಮಾಂಬಳ್ಳಿಗಳಲ್ಲಿ ಅಳವಡಿಸಲಾಗಿದೆ. ಸರ್ಕಾರಿ ರೇಷ್ಮೆ ಕಾರ್ಖಾನೆಗಳ ರೇಷ್ಮೆ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು ಈ ಕಾರ್ಖಾನೆಗಳಿಗೆ ಭೇಟಿ ನೀಡಿ ಕಾರ್ಮಿಕ ವರ್ಗ/ಅಧಿಕಾರಿ/ಸಿಬ್ಬಂದಿಗಳಿಗೆ ಸಲಹೆ, ಸೂಚನೆ, ಹಾಗೂ ತರಬೇತಿ ನೀಡಿದ್ದಾರೆ.

ಉ&ಊ) ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಪ್ರಸ್ತುತ ಹೊಸ ತಳಿ ಹಿಪ್ಪುನೇರಳೆ ನಾಟಿ ಮಾಡಿದಲ್ಲಿ ಅವರಿಗೆ ಕೇಂದ್ರ ರೇಷ್ಮೆ ಮಂಡಳಿಯ ಆರ್ಥಿಕ ನೆರವಿನ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮದಡಿ ಪ್ರತಿ ಎಕರೆಗೆ ರೂ.4125/–ಗಳನ್ನು ಪ್ರೋತ್ಸಾಹಧನವನ್ನಾಗಿ ನೀಡಲಾಗುತ್ತಿದೆ. ಈ ಪ್ರೋತ್ಸಾಹಧನ ಹೆಚ್ಚಿಸುವ ಪ್ರಸ್ತಾವನೆಯು ಕೇಂದ್ರ ರೇಷ್ಮೆ ಮಂಡಳಿಯ ಪರಿಶೀಲನೆಯಲ್ಲಿದ್ದು, ಅವರ ಅನುಮೋದನೆಯ ನಂತರ ಜಾರಿಗೆ ತರಲಾಗುವುದು.

ಋ&ಎ) ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಬಿಡುಗಡೆಯಾಗುತ್ತಿರುವ ಮೊತ್ತವನ್ನು ಆಯಾ ವರ್ಷವೇ ಸಂಪೂರ್ಣವಾಗಿ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಹೆಚ್ಚುವರಿ ವಂಟನೆಯನ್ನು ಒದಗಿಸುವಂತೆ ಕೋರಿ ಇಲಾಖೆಯು ಪ್ರಸ್ತಾವನೆ ಸಲ್ಲಿಸಿದ್ದು ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ವಂಟನೆ ಆಧರಿಸಿ ಸಹಾಯಧನ ನೀಡಲಾಗುವುದು.

ಏ) ಇದೆ.

ಕೇಂದ್ರ ರೇಷ್ಮೆ ಮಂಡಳಿಯ ಆರ್ಥಿಕ ನೆರವಿನ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಪ್ರಸ್ತುತ 1000 ಚ.ಅಡಿ ಮನೆಗೆ ರೂ.75,000/– 600 ಚ.ಅಡಿ ಮನೆಗೆ ರೂ.50,000/ ಹಾಗೂ 375 ಚ.ಅಡಿ ಮನೆಗೆ ರೂ.25,00/–ಗಳ ಸಹಾಯಧನ ನೀಡಲಾಗುತ್ತಿದೆ. ಈ ಮೊತ್ರವನ್ನು ಕ್ರಮವಾಗಿ ರೂ.1,00,000/–, 75,000/– ಹಾಗೂ 37,500/–ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯು ಕೇಂದ್ರ ರೇಷ್ಮೆ ಮಂಡಳಿಯ ಮುಂದಿದೆ. ಅವರ ಅನುಮೋದನೆ ದೊರೆತ ಕೂಡಲೇ ಜಾರಿಗೆ ತರಲಾಗುವುದು.

ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ

285 (825) ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ):–(ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ರಾಜ್ಯದಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹವಿಲ್ಲದೆ ಕ್ರೀಡಾಪಟುಗಳು ಅನ್ಯ ರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಹಾಗೂ ರಾಷ್ಟ್ರ ಮಟ್ಟದಲ್ಲಿ ಕೀಡಾ ಪಟುಗಳಿಗೆ